**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. *884/2014***

**ಪಿ.ಡಬ್ಲ್ಯೂ: *13***

**ಸಿ.ಡಬ್ಲ್ಯೂ: *11***

**ಸಾಕ್ಷಿದಾರರ ಹೆಸರು** : ಸಾಯಿಕೃಷ್ಣ

ತಂದೆಯ **ಹೆಸರು** : ರವಿನಾರಾಯಣ

**ವಯಸ್ಸು** : *32* **ವರ್ಷ**

**ಉದ್ಯೋಗ** : ಖಾಸಗಿ ಉದ್ಯೋಗ

**ವಾಸಸ್ಥಳ** : ಬೆಂಗಳೂರು

**ದಿನಾಂಕ: *27-01-2020* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಂದೆ. ಆರೋಪಿಗೆ ನಾನು ಒಬ್ಬನೆ ಮಗನಾಗಿರುತ್ತೇನೆ. ಆರೋಪಿ ಚಿಕ್ಕಮಗಳೂರಿನ ಗ್ರಾಮೀಣ ಬ್ಯಾಂಕಿನಲ್ಲಿ ಉದ್ಯೋಗಿಯಾಗಿದ್ದು, ತರೀಕೆರೆಯ ಬಾವಿಕೆರೆಯಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ದಿ:***03-06-2013*** ರಂದು ತರೀಕೆರೆಯಿಂದ ಕಡೂರಿಗೆ ಆರೋಪಿ ಬಸ್ಸಿನಲ್ಲಿ ಬರುತ್ತಿರುವಾಗ ಸುಮಾರು ***15*** ಲಕ್ಷ ರೂಪಾಯಿಗಳು ಕಳುವು ಆಗಿದೆ ಎನ್ನುವ ಬಗ್ಗೆ ಪೊಲೀಸರು ನನಗೆ ದೂರವಾಣಿ ಮೂಲಕ ತಿಳಿಸಿದ್ದು ನಂತರ ಬ್ಯಾಂಕಿನ ರಿಜಿನಲ್ ಮ್ಯಾನೇಜರ್ ಗುರುನಾಥರವರು ನನಗೆ ಫೋನ್ ಕರೆ ಮಾಡಿ ನಿಮ್ಮ ತಂದೆ ದುಡ್ಡನ್ನು ಕಳೆದುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ಕಡೂರಿನ ಚೇತನ ನರ್ಸಿಂಗ್ ಹೋಂಗೆ ಬ್ಯಾಂಕಿನ ಸಿಬ್ಬಂದಿಗಳು ನನ್ನ ತಂದೆ ಆರೋಪಿಯನ್ನು ಕರೆದುಕೊಂಡು ಹೋಗಿರುತ್ತೇವೆ ಎಂದು ನನಗೆ ತಿಳಿಸಿದ್ದು ನನಗೆ ಸದರಿ ಆಸ್ಪತ್ರೆಗೆ ಬರುವಂತೆ ತಿಳಿಸಿರುತ್ತಾರೆ. ನಾನು ಅದೇ ದಿನ ಸಂಜೆ ಸುಮಾರು ***7-00*** ಗಂಟೆಗೆ ನಾನು ಮತ್ತು ನನ್ನ ತಾಯಿ ಆಸ್ಪತ್ರೆಗೆ ಹೋದೆವು. ಆ ಸಮಯದಲ್ಲಿ ಶಂಕರ್ ಕನವಳ್ಳಿ ಎಂಬುವವರು ನಾನು ಸದರಿ ಆಸ್ಪತ್ರೆಗೆ ಹೋದಾಗ ಆರೋಪಿ ದುಡ್ಡು ಕಳೆದುಕೊಂಡಿದ್ದರಿಂದ ಶಾಖ್ ನಲ್ಲಿ ಇದ್ದಾರೆ ಎಂದು ತಿಳಿಸಿದ್ದು ನಂತರ ನನ್ನ ತಂದೆಗೆ ಚಿಕಿತ್ಸೆ ನೀಡಿ ಒಂದು ದಿನ ಆಸ್ಪತ್ರೆಯಲ್ಲಿ ಇರುವಂತೆ ತಿಳಿಸಿರುತ್ತಾರೆ. ನಂತರ ನಾನು ಮನೆಗೆ ಹಿಂತಿರುಗಿದೆ ನಂತರ ಮರುದಿನ ಬಂದಾಗ ಗುರುನಾಥ್ ಎಂಬುವವರು ಆಸ್ಪತ್ರೆಯಲ್ಲಿ ಇದ್ದರು. ಸದರಿ ಗುರುನಾಥ್ ರವರು ಆರೋಪಿ ಹಣ ಕಳೆದುಕೊಂಡಿರುವುದ ಹೌದು ಅದನ್ನು ಮರಳಿ ಬ್ಯಾಂಕಿಗೆ ಕಟ್ಟಬೇಕಾಗುತ್ತದೆ ಎಂದು ತಿಳಿಸಿದರು. ತಕ್ಷಣ ಸದರಿ ***15*** ಲಕ್ಷವನ್ನು ಹಿಂತಿರುಗಿ ಕಟ್ಟುವುದು ನನಗೆ ಸಾಧ್ಯವಿರಲಿಲ್ಲ. ಕೆಲವು ದಿನಗಳ ನಂತರ ಗುರುನಾಥರವರು ನನಗೆ ದೂರವಾಣಿ ಕರೆ ಮಾಡಿ ಇದರ ಭಾದ್ಯತೆ

ಆರೋಪಿಗಲ್ಲದೆ ನಿಮ್ಮ ಮೇಲೆ ಬರುತ್ತದೆ ಆದಷ್ಟು ಬೇಗ ಸದರಿ *15* ಲಕ್ಷ ರೂ. ಹಣವನ್ನು ಬ್ಯಾಂಕಿಗೆ ಕಟ್ಟುವಂತೆ ನನಗೆ ತಿಳಿಸಿದರು. ನಾನು ಕೈಯಲ್ಲಿದ್ದ ಒಂದಷ್ಟು ಹಣ ಹಾಗೂ ನಮ್ಮ ತಾಯಿಯ ಒಡವೆಗಳ ಮಾರಾಟ ಮಾಡಿ ಬಂದ ಹಣವನ್ನು ಸೇರಿಸಿ ಒಟ್ಟು *5* ಲಕ್ಷ ಹಣವನ್ನು *3-4* ದಿನಗಳ ನಂತರ ಕಡೂರು ಶಾಖೆಯ ಕಾವೇರಿ ಗ್ರಾಮೀಣ ಬ್ಯಾಂಕಿಗೆ ಕಟ್ಟಿರುತ್ತೇನೆ. ನಿಪಿ-*20* ರಲ್ಲಿರುವ ಸಾಕ್ಷಿ ತಮ್ಮ, ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-*20*(ಡಿ) ಎಂದು ಗುರುತಿಲಾಯಿತು. ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆಯ ಆಡಿಟರ್ ಆದ ಸತ್ಯನಾರಾಯಣ ನನಗೆ ದೂರವಾಣಿ ಕರೆ ಮಾಡಿ ತರೀಕೆರೆಗೆ ಬರುವಂತೆ ತಿಳಿಸಿದರು. ಬ್ಯಾಂಕಿಗೆ ಸಂಬಂಧಪಟ್ಟ ದಾಖಲೆಗಳು ಹಾಗೂ ಕೀಗಳನ್ನು ತರುವಂತೆ ನನಗೆ ತಿಳಿಸಿದರು. ನನ್ನನ್ನು ಬಾವಿಕೆರೆ ಕಾವೇರಿ ಗ್ರಾಮೀಣ ಬ್ಯಾಂಕ್ ಬಾಂಚ್ ಗೆ ಕರೆದುಕೊಂಡು ಹೋದರು. ಸತ್ಯನಾರಾಯಣ ಹಾಗೂ ಬ್ಯಾಂಕಿನ ಮತ್ತೊಬ್ಬ ಮಹಿಳಾ ಸಿಬ್ಬಂದಿಯವರು ಇದ್ದು ಸದರಿಯವರು ಸೇಫ್ ಲಾಕರ್ ನ್ನು ತೆರೆದಿದ್ದು ನಾನು ಬ್ಯಾಂಕಿನ ಹೊರಗಡೆ ಇದ್ದೆ. ಸದರಿ ಸತ್ಯನಾರಾಯಣರವರು ನೀವು ಬ್ಯಾಂಕಿಗೆ ಸಂಬಂಧಿಸಿದ ದಾಖಲೆ ಹಾಗೂ ಕೀಗಳನ್ನು ತಂದುಕೊಟ್ಟ ಬಗ್ಗೆ ವರದಿಯನ್ನು ತಯಾರು ಮಾಡುತ್ತೇವೆ ಸದರಿ ವರದಿಗೆ ಸಹಿ ಮಾಡುವಂತೆ ನನಗೆ ತಿಳಿಸಿರುತ್ತಾರೆ. ನಾನು ಸದರಿ ಶಾಖೆಗೆ ಹೋದಾಗ ಶಶಿಧರ್ ಮೂರ್ತಿ ಎಂಬುವವರು ನನ್ನ ತಂದೆ ಆರೋಪಿಯ ಸಹೋದ್ಯೋಗಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಸದರಿಯವರು ನನಗೆ ಬಹಳ ವರ್ಷಗಳಿಂದ ಪರಿಚಯವಿರುತ್ತಾರೆ. ನಾನು ತನಿಖಾಧಿಕಾರಿಯವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

***<u>ಪಾಟೀ ಸವಾಲು : ಆರೋಪಿ ಪರ</u>*** <u>ಶ್ರೀ ಎಂ ಕೆ ಟಿ</u> ***<u>ವಕೀಲರಿಂದ.</u>***

ಆರೋಪಿಯು ಬ್ಯಾಂಕಿನಲ್ಲಿ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿ ಬ್ಯಾಂಕಿನಲ್ಲಿ ನಕಲಿ ಬಂಗಾರವನ್ನು ಅಡವಿಟ್ಟು ಉಪಯೋಗಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಸ್ಪಷ್ಟವಾಗಿ ತಿಳಿದುಕೊಂಡಿಲ್ಲ. ಚಾಸಾ-*1* ರವರು ನನಗೆ ಹಣವನ್ನು ಪಾವತಿಸುವ ಬಗ್ಗೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಹೇಳಿದ್ದರಿಂದ ನನಗೆ ಮತ್ತು ನನ್ನ ತಾಯಿಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೆ *5* ಲಕ್ಷ ಹಣವನ್ನು ಪಾವತಿಸಿರುತ್ತೇನೆ ಎಂದರೆ ಸರಿ. ಬ್ಯಾಂಕಿನಲ್ಲಿರುವ ದಾಖಲಾತಿ ಮತ್ತು ಬಂಗಾರದ ಅಭರಣಗಳನ್ನು ಬ್ಯಾಂಕಿನ ಅಪ್ರೈಜರ್ ಪರಿಶೀಲನೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿನ ಕೊನೆಯ ಪ್ಯಾರಾದ ಅಂಶಗಳು ನನಗೆ ಗೊತ್ತಿರುವುದಿಲ್ಲ. ಪ್ರಕರಣಕ್ಕಿಂತ ಪೂರ್ವದಲ್ಲಿ ನನ್ನ ತಂದೆ ಆರೋಪಿಯ ನಡವಳಿಕೆ ಸಾಮಾನ್ಯವಾಗಿ ಇದ್ದು ಯಾವುದೇ ದುರ್ನಡತೆ ಕಂಡುಬಂದಿರುವುದಿಲ್ಲ. ನನಗೆ ಗೊತ್ತಿರುವ ಹಾಗೆ ಪ್ರಸ್ತುತ ಪ್ರಕರಣಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣಗಳು ನನ್ನ ತಂದೆಯ ವಿರುದ್ಧ ದಾಖಲಾಗಿಲ್ಲ ಎಂದರೆ ಸರಿ. ಆರೋಪಿಯು ಬ್ಯಾಂಕಿನಲ್ಲಿ ನಕಲಿ ಬಂಗಾರವನ್ನು

ಅಡವಿಟ್ಟು ಹಣವನ್ನು ದುರುಪಯೋಗಪಡಿಸಿಕೊಂಡ ವಿಚಾರ ಬ್ಯಾಂಕಿನ ಮ್ಯಾನೇಜರ್ ಚಾಸಾ-*2* ರವರು ಹೇಳಿದ ಮೇಲೆ ತಿಳಿದಿದೆ ಎಂದರೆ ಸರಿ.

**ಮರುವಿಚಾರಣೆ: ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**